ಒಲಿಂಪಿಕ್ಸ್ ಎನ್ನುವುದೊಂದು ಮಹಾನದಿ. ಗುಪ್ತಗಾಮಿನಿಯಾಗಿ ಹರಿಯುವ ಈ ಕ್ರೀಡಾಹೊಳೆ, ನಾಲ್ಕು ವರ್ಷಗಳಿಗೊಮ್ಮೆ ಮೈದೋರಿ, ಕ್ರೀಡಾಪ್ರೇಮಿಗಳ ಕುಂಭಮೇಳದ ಸ್ಥಳವಾಗಿ ಪರಿಣಮಿಸುತ್ತದೆ. ವಿಭಿನ್ನ ಸಂಸ್ಕೃತಿ ಹಾಗೂ ರಾಷ್ಟ್ರೀಯತೆಯ ಹಲವು ತೊರೆಗಳು ಆ ಮಹಾನದಿಯ ಭಾಗವಾಗಿ ಸಂಭ್ರಮಿಸುತ್ತವೆ. ಕೊರೊನಾ ಕಾರಣದಿಂದಾಗಿ ಈ ಬಾರಿಯ ಒಲಿಂಪಿಕ್ಸ್ ವಿಶೇಷ ಮಹತ್ವ ಪಡೆದುಕೊಂಡಿದೆ. ಕೋವಿಡ್ ಆತಂಕ, ಅಂತರರಾಷ್ಟ್ರೀಯ ಪ್ರಯಾಣಕ್ಕೆ ಕಠಿಣ ನಿಯಮಗಳು, ಜಗತ್ತಿನ ದೊಡ್ಡ ಕ್ರೀಡಾಕೂಟ ಆಯೋಜಿಸಲು ಎದುರಾದ ಪ್ರಬಲ ವಿರೋಧ, ಹೀಗೆ ಎಲ್ಲ ಅಡೆತಡೆಗಳನ್ನು ಮೀರಿ ಜುಲೈ 23ರಿಂದ ಆಗಸ್ಟ್ 8ರ ತನಕ ಜಪಾನ್ ರಾಜಧಾನಿ ಟೋಕಿಯೊದಲ್ಲಿ ಕ್ರೀಡಾವೈಭವ ಅನಾವರಣಗೊಳ್ಳಲಿದೆ. ಸೋಂಕಿನ ಹಾವಳಿಯ ಕಾರಣದಿಂದಾಗಿ ಮನುಕುಲದ ಜೀವಂತ ಸಾಂಸ್ಕೃತಿಕ ಕಾವ್ಯ ಎನಿಸಿರುವ ಒಲಿಂಪಿಕ್ಸ್ ಸ್ಪರ್ಧೆಗಳು ಈ ಬಾರಿ ಸಂಘಟಕರು ಹಾಗೂ ಕ್ರೀಡಾಪಟುಗಳಿಗೆ ಸವಾಲಾಗಿ ಪರಿಣಮಿಸಿವೆ. 'ಒಲಿಂಪಿಕ್ಸ್ ಕಥನ' ಸಹೃದಯರನ್ನು ರೋಮಾಂಚನಗೊಳಿಸುವಂತಹದ್ದು ಹಾಗೂ 'ನಾವೆಲ್ಲಾ ಒಂದು' ಎನ್ನುವ ಮಾನವೀಯ ಭಾವವನ್ನು ಉದ್ದೀಪಿಸುವಂತಹದ್ದು.

■ ಪ್ರಮೋದ



ಒಲಿಂಪಿಕ್ಸ್‌ನ ಉದ್ಘಾಟನೆ ಹಾಗೂ ಸಮಾರೋಪ ನಡೆಯಲಿರುವ ಜಪಾನ್‌ನ ರಾಷ್ಟ್ರೀಯ ಕ್ರೀಡಾಂಗಣದ ಹೊರ ನೋಟ